ದಿನಾಂಕಃ 06/08/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ 1 ರಿಂದ 4, 6 ಮತ್ತು 7 ಪರ ಶ್ರೀ ಎನ್ ಎಸ್ ವಕೀಲರಿಂದಃ**

1. ನಾನು ಪ್ರತಿವಾದಿ 5 ರವರ ಪತ್ನಿ ಭಾರತಿ ರವರ ತಮ್ಮ. 5 ನೇ ಪ್ರತಿವಾದಿಯು ಭಾರತಿ ರವನ್ನು ಪ್ರೇಮ ವಿವಾಹವಾಗಿ ಸಿರಸಿ ಕಡೆಗೆ ಹೋಗಿದ್ದರು ಅಂದರೆ ಓಡಿಸಿದ್ದರು. ಅಂದಿನಿಂದ ಅವರು ಅಲ್ಲಿಯೇ ತನ್ನ ಪತಿ ಮತ್ತು ಮಕ್ಕಳೊಂದಿಗೆ ವಾಸವಾಗಿದ್ದಾರೆ ಅನ್ನುವುದು ಸರಿ, ಇಲ್ಲಿಗೆ ಬಂದು ಹೋಗುತ್ತಿದ್ದರು, ಅವರ ಚಿಕ್ಕ ಮಗ ಇಲ್ಲಿಯೇ ಓದುತ್ತಿದ್ದರು.

2. ಈ ಮೊದಲು ಪ್ರತಿವಾದಿ 1 ಮತ್ತು 7 ರವರ ನಡುವೆ ಪ್ರಕರಣಗಳು ನಡೆದಿದ್ದವು ಅನ್ನುವುದು ಸರಿ. ಆ ಪ್ರಕರಣಗಳು 7 ನೇ ಪ್ರತಿವಾದಿ ಮತ್ತು ವೆಂಕಟರೆಡ್ಡಿ ರವರ ಪರವಾಗಿ ಆಗಿವೆ ಅನ್ನುವುದು ಸರಿ. 5 ನೇ ಪ್ರತಿವಾದಿಯು ತನ್ನ ಭಾಗದ ಜಮೀನುಗಳನ್ನು ವೆಂಕಟರೆಡ್ಡಿ ಮತ್ತು ಪ್ರತಿವಾದಿ 7 ರವರಿಗೆ ಮಾರಾಟ ಮಾಡಿದ್ದಾರೆ ಅನ್ನುವುದು ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಈಗ 7 ನೇ ಪ್ರತಿವಾದಿಯೇ ಸ್ವಾಧೀನದಲ್ಲಿದ್ದಾರೆ ಅನ್ನುವುದು ಸರಿ.

O.S.No.8/2024 & 122/2021
PW-4

3. ವಾದಿಗಳು, ಪ್ರತಿವಾದಿ 5 ಮತ್ತು ಪ್ರತಿವಾದಿ 7 ರವರು ಒಟ್ಟು ಕುಟುಂಬದಲ್ಲಿ ಇಲ್ಲ ಅನ್ನುವುದು ಸರಿಯಲ್ಲ. ಪ್ರತಿವಾದಿ 5 ರವರ ಪತ್ನಿ ನನ್ನ ಸಹೋದರಿ ಆಗಿರುವುದರಿಂದ ವಾದಿಗಳಿಗೆ ಹಾಗೂ ಪ್ರತಿವಾದಿ 5 ರವರಿಗೆ ಸಹಾಯವಾಗಲಿ ಎಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅನ್ನುವುದು ಸರಿಯಲ್ಲ.

**ಮರು ವಿಚಾರಣೆ: ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಕೆ. ಎ. ನಾಗೇಶ)
1 ನೇ ಅಪರ ಹಿರಿಯ ಸಿ.ಜೆ. ಮತ್ತು ಜೆಎಂಎಫ್‌ಸಿ
ಕೆಜಿಎಫ್

ದಿನಾಂಕಃ 06/08/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ 1 ರಿಂದ 4, 6 ಮತ್ತು 7 ಪರ ಶ್ರೀ ಎನ್ ಎಸ್ ವಕೀಲರಿಂದಃ**

1. ವಾದಿಗಳು ಈ ದಾವೆಯನ್ನು ಯ್ಯಾವ್ಯಾವ ಆಸ್ತಿಗಳಿಗೆ ದಾಖಲಿಸಿದ್ದಾರೆ ಎಂದು ಹೇಳಲು ಆಗುವುದಿಲ್ಲ. 5 ನೇ ಪ್ರತಿವಾದಿಯು ಭಾರತಿ ಅನ್ನುವವರು ಪ್ರೇಮ ವಿವಾಹವಾಗಿ ಸಿರಸಿ ಕಡೆಗೆ ಹೋಗಿದ್ದರು ಅನ್ನುವುದು ಸರಿ. ಅಂದಿನಿಂದ ಅವರು ಅಲ್ಲಿಯೇ ತನ್ನ ಪತಿ ಮತ್ತು ಮಕ್ಕಳೊಂದಿಗೆ ವಾಸವಾಗಿದ್ದಾರೆ ಅನ್ನುವುದು ಸರಿ, ಇಲ್ಲಿಗೆ ಬಂದು ಹೋಗುತ್ತಿದ್ದರು. ಈ ಮೊದಲು ಪ್ರತಿವಾದಿ 5 ಮತ್ತು 7 ರವರ ನಡುವೆ ಪ್ರಕರಣಗಳು ನಡೆದಿದ್ದವು ಅನ್ನುವುದು ಸರಿ. ಆ ಪ್ರಕರಣಗಳು 7 ನೇ ಪ್ರತಿವಾದಿ ಪರವಾಗಿ ಆಗಿವೆ ಅನ್ನುವುದು ಸರಿ. ದಾವಾ ಆಸ್ತಿಗಳಲ್ಲಿ ಈಗ 7 ನೇ ಪ್ರತಿವಾದಿಯೇ ಸ್ವಾಧೀನದಲ್ಲಿದ್ದಾರೆ ಅನ್ನುವುದು ಸರಿ.

2. ಮುನಿಸ್ವಾಮಿ ರೆಡ್ಡಿ ಸುಮಾರು 5 ವರ್ಷಗಳ ಹಿಂದೆ ತೀರಿಕೊಂಡಿದ್ದಾರೆ. ಪ್ರತಿವಾದಿ 5 ರವರು ಸಿರಸಿಗೆ ಹೋದ ನಂತರ ಬಳುವನಹಳ್ಳಿಯಲ್ಲಿ ಅವರಿಗೆ ಸೇರಿದ ಮನೆ ಇರುವುದಿಲ್ಲ ಅನ್ನುವುದು ಸರಿ. ನನಗೆ ಸೇರಿದ ಸರ್ವೆ ನಂಬರ್ 55 ರ ಆಸ್ತಿಯು ದಾವಾ ಸ್ವತ್ತುಗಳ ಪೈಕಿ 1 ಜಮೀನಿನ ಪಕ್ಕದಲ್ಲಿದೆ, ಅದರೆ ಸರ್ವೆ ನಂಬರ್ ಹೇಳಲು

O.S.No.8/2024 & 122/2021

PW-3

ಆಗುವುದಿಲ್ಲ. ವಾದಿಗಳು, ಪ್ರತಿವಾದಿ 5 ಮತ್ತು ಪ್ರತಿವಾದಿ 7 ರವರು ಒಟ್ಟು ಕುಟುಂಬದಲ್ಲಿ ಇಲ್ಲ ಅನ್ನುವುದು ಸರಿ. ಪ್ರತಿವಾದಿ 5 ರವರು ಈಗಾಗಲೇ ತನ್ನ ಆಸ್ತಿಗಳನ್ನು ವೆಂಕಟರೆಡ್ಡಿ ಮತ್ತು ಪ್ರತಿವಾದಿ 5 ರವರಿಗೆ ಮಾರಾಟ ಮಾಡಿದ್ದು ಈಗ ಅವರ ಮಕ್ಕಳೊಂದಿಗೆ ಸೇರಿ ಸುಳ್ಳು ದಾವೆ ದಾಖಲಿಸಿದ್ದಾರೆ ಅನ್ನುವುದು ಸರಿಯಲ್ಲ. ವಾದಿಗಳಿಗೆ ಹಾಗೂ ಪ್ರತಿವಾದಿ 5 ರವರಿಗೆ ಸಹಾಯವಾಗಲಿ ಎಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅನ್ನುವುದು ಸರಿಯಲ್ಲ.

**ಮರು ವಿಚಾರಣೆ: ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಕೆ. ಎ. ನಾಗೇಶ)
1 ನೇ ಅಪರ ಹಿರಿಯ ಸಿ.ಜೆ. ಮತ್ತು ಜೆಎಂಎಫ್‌ಸಿ
ಕೆಜಿಎಫ್